INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-6, Issue -6, November--December, 2024,
PageNo,66-71
Peer -Reviewed, Refereed Journal

# ಬೌದ್ಧಧಮ್ಮದ ಪ್ರಮುಖ ಆದೇಶಗಳು: ಒಂದು ನೋಟ

**ಡಾ.ಕಾಳಸ್ವಾಮಿ.ಹೆಚ್.ಎನ್.**[1]

ಗುರು ಬುದ್ಧರು ಉದಾತ್ತ ಸದ್ಗುಣ ಬೋಧನೆಗಳು ಅಥವಾ ಬೌದ್ಧಧಮ್ಮದ ಪ್ರಧಾನ ತತ್ವ–ದರ್ಶನಗಳನ್ನು ಬೌದ್ಧರ ಮೂಲ ಪಠ್ಯಗಳು ಅಥವಾ ಪವಿತ್ರ ಗ್ರಂಥಗಳಾದ ತ್ರಿಪಿಟಕಗಳಲ್ಲಿ ಕಾಣಬಹುದು. ಅವುಗಳೆಂದರೆ;

**ಮೊದಲನೆಯದು; ವಿನಿಯ ಪಿಟಕ:**ಇದರಲ್ಲಿ ಬೌದ್ಧ ಬಿಕ್ಷುಗಳು ಪಾಲಿಸಬೇಕಾದ ಶಿಸ್ತು ಬದ್ಧ ನಿಯಮಗಳನ್ನು ಅಡಕಗೊಳಿಸಲಾಗಿದೆ.

**ಎರಡನೆಯದು; ಸುತ್ತ ಪಿಟಕ:** ಇದರಲ್ಲಿ ಗುರು ಬುದ್ಧರ ಉದಾತ್ತ ಸದ್ಗುಣ ಬೋಧನೆಗಳು ಹಾಗೂ ಗುರು ಬುದ್ಧರ ಪೂರ್ವಾಶ್ರಮದ ತಿಳಿಸುವ 548 ಜಾತಕ ಕಥೆಗಳನ್ನು ಅಡಕಗೊಳಿಸಲಾಗಿದೆ.

**ಮೂರನೆಯದು; ಅಭಿಧಮ್ಮ ಪಿಟಕ:** ಇದು ದರ್ಶನ ಜ್ಞಾನವನ್ನು ಹೊಂದಿದ್ದಾಗಿದೆ. ಇದೇ ಅಲ್ಲದೆ ಬುದ್ಧಗುರುವಿನ ತತ್ವಜ್ಞಾನ ಸಾರ್ವಪ್ರಮುಖ ಕೃತಿ ಎನಿಸಿದೆ. ಆದ್ದರಿಂದಲೇ ತ್ರಿಪಿಟಕಗಳನ್ನು ತ್ರಿರತ್ನಗಳೆಂದು ಕರೆಯಲಾಗಿದೆ. ಈ ಕೃತಿಗಳಲ್ಲಿ ಬರುವ ವಿಚಾರಗಳನ್ನು ಮೂಲ ಪಾಲಿ ಭಾಷೆಯಲ್ಲಿ ರಚಿಸಿರುವುದು ಕಂಡುಬಂದಿದೆ. ಅದೇ ರೀತಿ ಬೌದ್ಧಧಮ್ಮದ ಪ್ರಮುಖ ನಾಲ್ಕು ತತ್ವಗಳಾದ ಅಹಿಂಸೆ, ಸತ್ಯ, ಕಳ್ಳತನ ಮಾಡದಿರುವುದು ಮತ್ತು ಬ್ರಹ್ಮಚರ್ಯ ಇವುಗಳು ಬೌದ್ಧಧಮ್ಮದ ಪ್ರಾತಃ ಸ್ಮರಣೀಯ ರೂಪಗಳಾಗಿ ಉಳಿದು ಬೆಳೆದುಕೊಂಡು ಬಂದಿವೆ. ಅದೇ ರೀತಿ ನಾಲ್ಕು ಶ್ರೇಷ್ಠ ಸತ್ಯಗಳು, ಅಷ್ಟಾಂಗೀಕ ಮಾರ್ಗಗಳು, ಹತ್ತು ಆದೇಶಗಳು ಅಹಿಂಸೆ, ಕರ್ಮ ಸಿದ್ಧಾಂತದಲ್ಲಿನ ನಂಬಿಕೆ ವಿಚಾರ, ದೇವರಲ್ಲಿ ನಂಬಿಕೆ ಇಲ್ಲದಿರುವ ವಿಚಾರ, ನಿರ್ವಾಣದಂತಹ ವಿಧಾನದ ವಿಚಾರ, ಜಾತಿಪದ್ಧತಿಯ ವಿರೋಧ, ವೈದಿಕ ಧರ್ಮದ ಖಂಡನೆ, ನೈತಿಕ ಜೀವನ, ಪರಿಶುದ್ಧ ಜೀವನಕ್ಕೆ ಆದ್ಯತೆ ಇವೆಲ್ಲವುಗಳು ಬೌದ್ಧಧಮ್ಮದ ವಿಕಾಸಕ್ಕೆ ಬೌದ್ಧಧಮ್ಮದ

[1].ಸಂಶೋಧನ ಸಹಾಯಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ,ಮೈಸೂರು.

ಸಂಘದ ಅಡಿಯಲ್ಲಿ ಸಾಹಿತ್ಯ ರೂಪಗಳಾಗಿ ಉಳಿದು ಬೆಳೆದು ಬಂದಿರುವುದು ಇಂದಿಗೂ ಕೂಡ ಕಂಡುಬರುತ್ತದೆ.

**ಬೌದ್ಧಧಮ್ಮದ ಚಾರಿತ್ರಿಕ ಬೆಳವಣಿಗೆ** – ಬೌದ್ಧಧಮ್ಮದ ವಿಕಾಸವನ್ನು ಕುರಿತು ಅದರ ಚಾರಿತ್ರಿಕ ಬೆಳವಣಿಗೆಯ ಅನ್ವಯವಾಗಿ ಜಾಗತಿಕ ಚಿಂತಕರು ಮತ್ತು ಹೆಸರಾಂತ ಇತಿಹಾಸಕಾರರಾಗಿರುವ ಎಡ್ವಿನ್ ಅರ್ನಾಲ್ಡ್ ಮತ್ತು ರೈಸ್ ಡೇವಿಡ್ಸ್ ಅವರಂತಹ ಮಹಾಶಯರು ತಮ್ಮ ಜ್ಞಾನದ ಆಧರಿತವಾಗಿ ರಚಿಸಿರುವ ಹಲವು ಹತ್ತು ಕೃತಿಗಳಲ್ಲಿ ಬೌದ್ಧಧಮ್ಮದ ಚಾರಿತ್ರಿಕ ಬೆಳವಣಿಗೆಯ ಪ್ರಮುಖ ಅಂಶಗಳನ್ನು ದಾಖಲಿಸಿದ್ದನ್ನು ಪ್ರಸ್ತುತ ಲೇಖನದಲ್ಲಿಯೂ ಗುರುತಿಸಿ ದಾಖಲೀಕರಿಸಲಾಗಿದೆ. ಬೌದ್ಧಧಮ್ಮದ ಚಾರಿತ್ರಿಕ ಬೆಳವಣಿಗೆಯನ್ನು ಮೂರು ಘಟ್ಟಗಳಾಗಿ ವಿಭಜಿಸಿಕೊಂಡು ಅಧ್ಯಯನ ಮಾಡಿರುವುದು ಪ್ರಮುಖವಾಗಿ ಕಂಡುಬಂದಿರುತ್ತದೆ. ಅವುಗಳೆಂದರೆ;

ಮೊದಲು ಪುದ್ಗಲವನ್ನು ಆಸ್ತ್ರವ–ಅನಾಸ್ತ್ರವ ವಿಭಜಿಸಿ ಸಂಸಾರ ನಿರೋಧವೇ ನಿರ್ವಾಣವಾಗಿದೆ ಎಂಬುದನ್ನು ಶಾಂತಿಯೆಂದು ನಿರ್ಧರಿಸಿದ್ದರು. ಚಿತ್ತ ಮಹಾಭೂಮಿಕೆ ಧರ್ಮಗಳಿದ್ದರು. ಇವನ್ನು ಆತ್ಮವೆಂದು ಹೇಳಲಾಗುವುದಿಲ್ಲ. ಬಾಹ್ಯತನವು ಅನಿತ್ಯ ಮತ್ತು ಕ್ಷಣಿಕ. ಆದರೆ ಹೇತು ಪ್ರತ್ಯಯ ವ್ಯವಸ್ಥೆಯು ಆಕಸ್ಮಿಕವಲ್ಲ. ಪ್ರತೀತ್ಯ ಸಮುತ್ಪನ್ನವಾದುದು (ಅಸ್ಮೀನ್‌ಸತಿ ಇದಂಭವತಿ) ಆದುದರಿಂದ ಕರ್ಮಕ್ಕೆ ತಕ್ಕ ಫಲ ವಿದ್ಯೆ ಇರುವುದು. ಧರ್ಮಗಳು ಸಂಸ್ಕಾರ ರೂಪಗಳು. ಬಾಹ್ಯತನದಲ್ಲಿ ರೂಪ, ಶಬ್ದ, ಗಂದರಸ, ಸ್ಪರ್ಶಗಳಂತೆಯೋ ಚಿತ್ತ ಚೈತ್ರಗಳಲ್ಲಿ ವೇದನ, ಸಂಜ್ಞೆ, ಸಂಸ್ಕೃತಗಳಂತೆಯೋ ವ್ಯಕ್ತವಾಗುತ್ತವೆ.

ಸಾಮಾಜಿಕ ರಚನೆಯ ದೃಷ್ಟಿಯಿಂದ, ಮತಲಾಂಛನದ ದೃಷ್ಟಿಯಿಂದ ಬೌದ್ಧಧಮ್ಮವು ಈಗ ಇರುವುದಕ್ಕಿಂತಲೂ ಆರಂಭ ಕಾಲಘಟ್ಟದಲ್ಲಿ ಸಂಪೂರ್ಣವಾಗಿ ಭಿನ್ನವಾದದ್ದಾಗಿತ್ತು. ಸನ್ಯಾಸತ್ವದ ವಿಚಾರದಲ್ಲಿ ದೊಡ್ಡ ಸ್ಥಾನ ಪಡೆದಿತ್ತು. ಸಂಘದಲ್ಲಿ ಬ್ರಹ್ಮಚಾರಿಗಳೇ ವಿನಹ ಗೃಹಸ್ಥಾಠಿಕರಲ್ಲ. ಕೆಲವು ಭಿಕ್ಷುಗಳು ಪ್ರಾಯಶ್ಚಿತ್ತಕ್ಕಾಗಿ ಆಗಾಗ ಒಂದು ಕಡೆ ಸೇರುತ್ತಿದ್ದರು. ಚೈತ್ಯವಂದನೆ, ಮಹಾಗುರು ಬುದ್ಧರ ವಿಗ್ರಹ ಪೂಜೆ ಮತ್ತು ವಿಹಾರಗಳು ಸ್ಥಾಪಿತಗೊಂಡಿರುವುದು ಕಂಡುಬರುವುದಿಲ್ಲ. ಒಟ್ಟಾರೆ ಗುರು ಬುದ್ಧ ಮತ್ತು ಸಾಮ್ರಾಟ್ ಅಶೋಕನ ಆಡಳಿತದ ಕಾಲಘಟ್ಟದವರೆಗೂ ಮಧ್ಯದೇಶದಿಂದ ಹೊರಗೆ ಪ್ರಚಾರವಾಗಿರಲಿಲ್ಲ. ಆದರೆ, ಮಧ್ಯಪ್ರದೇಶದಲ್ಲಿ ಬೌದ್ಧರು ಇಂತಹ ಹಿಂದೂಗಳಂತೆಯೇ ಆಚಾರ ವ್ಯವಹಾರಗಳನ್ನು ಹೊಂದಿದ್ದರು. ಭಿಕ್ಷುಗಳು ಸಾಮಾನ್ಯ ಜನರಿಗೆ ಬೋಧನೆ ಮಾಡುತ್ತಿರಲಿಲ್ಲ. ಬೌದ್ಧಧಮ್ಮವು ಭಿಕ್ಷುಗಳಿಗೆ ಮಾತ್ರವೆಂದು ಪರಿಗಣಿತವಾಗಿತ್ತು. ಅಟ್ಟಕಥೆಯಂತಹ ಮೂಲಗಳಿಂದ ಹಿಡಿದು ಬೌದ್ಧಧಮ್ಮದಲ್ಲಿ ಪ್ರಸ್ತುತ ಸರಿಸುಮಾರು 18 ಪಂಗಡಗಳು ಇರುವುದು ಅಧ್ಯಯನಗಳಿಂದ ತಿಳಿದುಬಂದಿರುತ್ತದೆ.

ಪರಿಶುದ್ಧ ಧಮ್ಮದ ಆಚರಣೆಗೆಂದು ಗೃಹಸ್ಥರಿಗೆ, ಭಿಕ್ಷುಕರಿಗೆ, ಮುಕ್ತಿಗಳಿಕೆಗೆ ಸಹಾಯಕವಾಗುವಂತೆ ಗುರು ಬುದ್ಧರು ಪ್ರಮುಖವಾಗಿ ಹತ್ತು ಆದೇಶಗಳನ್ನು ಪಾಲಿಸುವಂತೆ ಹೇಳಿದ್ದಾರೆ. ಸತ್ಯವನ್ನು ನುಡಿಯುವುದು. ಕಳ್ಳತನ ಮಾಡದಿರುವುದು. ಬ್ರಹ್ಮಚರ್ಯ ಪಾಲಿಸುವುದು. ಪರರ ವಸ್ತುಗಳನ್ನು ಕದಿಯದಿರುವುದು. ಅಹಿಂಸೆ ಪಾಲಿಸುವುದು. ಹೂ ಸುಗಂಧ ವಸ್ತುಗಳನ್ನು ಬಳಸಕೂಡದು. ನೃತ್ಯ, ಹಾಡುಗಾರಿಕೆಯಲ್ಲಿ ತೊಡಗಬಾರದು. ಮಹಿಳೆಯರ ಸಂಗ ಸಂಪೂರ್ಣವಾಗಿ ತ್ಯಜಿಸುವುದು. ಅಪಕ್ವಕಾಲ ಆಹಾರ ಸೇವಿಸಬಾರದು. ಮೃದುವಾದ ಹಾಸಿಗೆಯಲ್ಲಿ ಮಲಗಬಾರದು, ಮದ್ಯಪಾನ ಮಾಡಬಾರದು. ಹುಟ್ಟು ಸಾವುಗಳು ನಿಸರ್ಗದ ವ್ಯಾಪಾರಗಳಿದ್ದಂತೆ, ಮನುಷ್ಯನು ತನ್ನ ದಿನನಿತ್ಯದ ಕರ್ಮಗಳಲ್ಲಿ ಹುಟ್ಟಿ ಸಾಯುತ್ತಿರುತ್ತಾನೆ. ಇಂತಹ ಹುಟ್ಟು ಸಾವಿನ ಮಧ್ಯೆ ಪ್ರಜ್ಞೆ, ಶೀಲ ಮತ್ತು ಕರುಣೆಗಳಿಂದ ಔನತ್ಯಗಳಿಸುವುದು ಜೀವನದ ಮುಖ್ಯ ಗುರಿಯನ್ನಾಗಿಸಿ ಈ ಮೇಲಿನ ಹತ್ತು ಆದೇಶಗಳನ್ನು ಪಾಲಿಸಿ ಮುಕ್ತಗೊಳಿಸುವುದು ಪ್ರತಿಯೊಬ್ಬ ಜೀವಂತ ಮಾನವ ಜೀವಿಯ ಕರ್ತವ್ಯವೆನಿಸಿರುತ್ತದೆ.

**ಬೌದ್ಧಧಮ್ಮದಲ್ಲಿರುವ ದಶಪಾರಮ್ಯಗಳು** – ಸಾಧಕನಾದವನು ಏಕಾಂಗಿಯಾಗಿ ಹೋರಾಡಬೇಕೆ ವಿನಃ ಸಾಮೂಹಿಕವಾಗಿ ಅಲ್ಲ. ನಮ್ಮ ಪ್ರಯಾಣ ಹೊರಗಿನದ್ದಾದರೆ, ಹಲವು ಹತ್ತು ಸಂಗಡಿಗರನ್ನು ಒಗ್ಗೂಡಿಸಿಕೊಂಡು ಹೊರಡಬಯಹುದಿತ್ತು. ಅದು ಹೊರಗಿನ ವಸ್ತು ಆಗಿದ್ದರೆ ಅದರ ಸಂಪಾದನೆಗೆ ಸಾಮೂಹಿಕ ಪ್ರಯತ್ನ ಮಾಡಬಹುದಿತ್ತು. ಅದು ವ್ಯಕ್ತಿ ಪದಾರ್ಥವಾದ ಕಾರಣ ಪ್ರತಿಯೊಬ್ಬ ಸಾಧಕನು ತಾನೇ ಸ್ವಯಂ ಪ್ರಯತ್ನಿಸಬೇಕು. ಪಯಣದ ಕೊನೆಯ ಘಟ್ಟದವರೆಗೂ ಸಾಧಕನು ಏಕಾಂಗಿಯಾಗಿಯೇ ನಡೆಯಬೇಕು. ಇದೆಲ್ಲ ಗುರು ಬುದ್ಧರಂತವರಿಗೆ ಸಂತೋಷವಾಗಿಯೇ ತಿಳಿದಿರುತ್ತದೆ. ನಾನು ನಿನ್ನನ್ನು ಅಂತಿಮ ಘಟ್ಟದವರೆಗೂ ಕರೆದೊಯ್ಯುತ್ತೇನೆ ಎಂಬ ಮಾತುಗಳನ್ನು ಗುರು ಬುದ್ಧರು ಎಂದೂ ಎಲ್ಲಿಯೂ ಕೂಡ ಹೇಳಿರುವುದಿಲ್ಲ. ಆ ದಾರಿಗೆ ಯಾವುದೇ ಮಾರ್ಗಸೂಚಿಗಳಿಲ್ಲ. ಹಾಗೆ ಹೊರಡುವವರು, ಎಲ್ಲ ಬಗೆಯ ಆತಂಕ, ಆಘಾತಗಳಿಗೆ ಒಡ್ಡಿಕೊಳ್ಳಬೇಕಾಗುತ್ತದೆ. ಇಂತಹದೊಂದು ಪಯಣಕ್ಕೆ ಹೊರಡುವವನು ಅಗತ್ಯ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಆ ನಿಯಮಗಳನ್ನು ಗುರು ಬುದ್ಧರು "ಪಾರಮಿತ" ಎಂದು ಕರೆದಿದ್ದಾರೆ. ಪಾರಮಿತ ಎಂದರೆ; ಆಚೆಯ ದಡ ಸೇರಲು ನೆರವಾಗುವಂತಹದ್ದು ಎಂದರ್ಥ. ಈ ಹತ್ತು ನಿಯಮಗಳನ್ನು ತುಂಬಾ ಎಚ್ಚರದಿಂದ ತಿಳಿದುಕೊಳ್ಳುವುದು ಅವಶ್ಯವೆನಿಸಿದೆ. ಅವುಗಳೆಂದರೆ;

**ಮೊದಲನೆಯದು; ದಾನ** – ನಮ್ಮ ಬಳಿ ಇರುವುದೆನ್ನೆಲ್ಲ ಹೊರ ಜಗತ್ತಿನೊಂದಿಗೆ ಹಂಚಿಕೊಳ್ಳಬೇಕು ಎನ್ನುತ್ತಾರೆ ಗುರು ಬುದ್ಧರು. ಇದಕ್ಕೆ ಕಾರಣ ನಮ್ಮ ಬಳಿ ಇರುವ ಯಾವ ವಸ್ತುವೂ ನಮಗೆ ಸೇರಿದ್ದಲ್ಲ. ನಮ್ಮದೆಂದು ಭಾವಿಸುವುದೇ ನಿಜವಾದ ಅಪರಾಧ. ಅದು ಇಡೀ ವಿಶ್ವಪ್ರಜ್ಞೆಗೆ ನಾವು ಎಸಗುವ ಅಪರಾಧವಾಗಿದೆ. ಹೊರಜಗತ್ತಿಗೆ ಸೇರಿದ ಯಾವುದೇ ವಸ್ತುವನ್ನು ಹೆಚ್ಚೆಂದರೆ ನಾವು ಬಳಸಿಕೊಳ್ಳಬಹುದೇ ವಿನಃ ಅದನ್ನು ನಮ್ಮದೆಂದು ಸ್ವಾಧೀನಪಡಿಸಿಕೊಳ್ಳುವಂತಿಲ್ಲ. ಆ ವಸ್ತು ನಾವು

ಬರುವ ಮುನ್ನವು ಇತ್ತು, ನಾವು ಹೋದ ಮೇಲೂ ಇರುತ್ತದೆ. ಅಂದ ಮೇಲೆ ಅದು ಯಾರಿಗೆ ಸೇರಿದ್ದು, ಬರಗೈಲಿ ಬಂದು, ಬರಿಗೈಲಿ ಹೋಗುವ ನಾವು ಇಲ್ಲಿರುವಂತಹ ಕಾಲ ಮುಷ್ಠಿ ಬಿಗಿಹಿಡಿದುಕೊಂಡು ಬದುಕುವುದರಲ್ಲಿ ಅರ್ಥವಿಲ್ಲ, ತೆರೆದ ಕೈಗಳಿಂದ ಜೀವಿಸಿದಾಗ ಹೃದಯಗಳು ತೆರೆದುಕೊಳ್ಳುತ್ತವೆ. ಪ್ರಸ್ತುತ ದಾನ ಮಾಡುವ ವಸ್ತು ಮುಖ್ಯವಲ್ಲ, ದಾನವೊಂದೇ ಮುಖ್ಯ. ಆದ್ದರಿಂದ ದಾನವೇ ವಿಶೇಷವಾದ ಅಂಶವೆನಿಸಿದೆ.

**ಎರಡನೆಯದು; ಶೀಲ** – ಶೀಲವೆಂಬುದು ಬದುಕಿನಲ್ಲಿ ಮೈದಾಳುವ ಒಂದು ವಿಶಿಷ್ಟವಾದ ಸೊಬಗು. ಇದನ್ನು ಬೌದ್ಧ ಪಂಡಿತರು ಶತಮಾನಗಳಿಂದಲೂ ಕಟ್ಟುನಿಟ್ಟಿನ ಬದುಕು ಎಂದು ಅಪವ್ಯಾಖ್ಯಾನಿಸಿಕೊಂಡು ಬಂದಿದ್ದಾರೆ. ಶೀಲಕ್ಕೆ ಸೊಬಗು ಎಂಬ ಪದದ ಶಾಬ್ಧಿಕ ಅರ್ಥವೂ ಇದೆ. ಒಟ್ಟಾರೆ ಶೀಲ ಎಂಬುದು ಅಂತರಂಗದಲ್ಲಿ ಪಡೆಮೂಡುವ ಒಂದು ಮೌಲ್ಯವೇ ವಿನಃ ಬಹಿರಂಗದ ಹೇರಿಕೆ ಅಲ್ಲ.

**ಮೂರನೆಯದು; ಶಾಂತಿ** – ಶಾಂತಿ ಎಂದರೆ ತಾಳ್ಮೆ, ಸಮಾಧಾನ ಎಂದರ್ಥ. ದೂರ ತೀರ ತಲುಪುವುದು. ಸಾಧಾರಣ ಕೆಲಸವಲ್ಲ. ಅದೊಂದು ಅತೀ ದೀರ್ಘ ಪಯಣ. ಕಾಲದ ಮಾನದಂಡದಲ್ಲಿ ಅದನ್ನು ಅಳೆಯಲು ಸಾಧ್ಯವೇ ಇಲ್ಲದ ಕಾರಣ ಕೊನೆಯಿರದ ತಾಳ್ಮೆಯ ಅಗತ್ಯವಿದೆ. ಈ ತಾಳ್ಮೆಯ ಮುಖ್ಯ ತಾಣವೇ ಶಾಂತಿ.

**ನಾಲ್ಕನೆಯದು; ವಿದ್ಯಾ** – ವಿದ್ಯೆ ಎಂದರೆ ಸತ್ವ ಎಂದರ್ಥ. ನಮ್ಮೊಳಗಿನ ಜೀವ ಚೈತನ್ಯಕ್ಕೆ ನಾವು ಸದಾ ಜಾಗೃತರಾಗಿರಲು ಅಪರಿಮಿತ ಜೀವನ ಚೈತನ್ಯಕ್ಕೆ ವಿದ್ಯೆಯು ಮುಖ್ಯವಾದ ಅಂಶವೆನಿಸಿದೆ.

**ಐದನೆಯದು; ಧ್ಯಾನ** – ಧ್ಯಾನವೆಂದರೆ ಏನನ್ನೂ ಮಾಡದೇ ಸುಮ್ಮನೆ ಕೂರುವುದು ಎಂದರ್ಥ. ಹಾಗೆಯೇ ಸುಮ್ಮನಿದ್ದು ಬದುಕನ್ನು ಇನ್ನೂ ಗಾಢವಾಗಿ ಅನುಭವಿಸುವುದು ಎಂದರ್ಥ.

**ಆರನೆಯದು; ಪ್ರಜ್ಞಾ** – ಪ್ರಜ್ಞಾ ಎಂದರೆ ವಿವೇಚನೆ ಎಂದರ್ಥ. ಜ್ಞಾನ ಮತ್ತು ವಿವೇಚನೆ ಬೇರೆ. ವಿವೇಚನೆ ಎಂಬುದು ಸ್ವ ಅನುಭವದಿಂದ ಪ್ರಮಾಣಿತವಾದ ಜ್ಞಾನವಾಗಿದೆ.

**ಏಳನೆಯದು; ಉಪಾಯ** – ಉಪಾಯ ಒಳ್ಳೆಯದಲ್ಲ ಎಂದು ಗುರು ಬುದ್ಧರು ಪದೇ ಪದೇ ಹೇಳುತ್ತಾರೆ. ಯಾವುದೇ ಉಪಾಯ ಬಳಕೆಯಾದ ಮೇಲೆ ಅದನ್ನು ಪೂರ್ತಿಯಾಗಿ ಕೈಬಿಡಬೇಕು ಎಂದು ಹೇಳುತ್ತಾರೆ. ಅಷ್ಟೇ ಅಲ್ಲದೇ ಉಪಾಯಗಳನ್ನು ಬಳಸುವಾಗ ಮಮಕಾರ ಬೇರು ಬಿಡದಂತೆ ಜಾಗೃತವಹಿಸಬೇಕೆಂದು ಹೇಳಿದ್ದಾರೆ.

**ಎಂಟನೆಯದು; ಪ್ರಣಿಧಾನ** – ಪ್ರಣಿಧಾನ ಎಂದರೆ ಏನನ್ನೂ ಮಾಡಬೇಕಾದಂತಹ ಜೀವಂತ ಮಾನವನ ಮನಃಸ್ಥಿತಿಯದ್ದಾಗಿದೆ. ಸಮಾಧಿ ಸ್ಥಿತಿಗೇರಲು ಸಂಪೂರ್ಣವಾದ ಪ್ರಯತ್ನ

ಮಾಡಬೇಕಾಗುವುದಾದರೂ ಕಡೆಯ ಘಟ್ಟದಲ್ಲಿ ಏನನ್ನೂ ಮಾಡದೇ ಸುಮ್ಮನಿರಬೇಕೆಂದು ಗುರು ಬುದ್ಧರು ಹೇಳುತ್ತಾರೆ.

**ಒಂಭತ್ತನೆಯದು; ಬಲ** – ಶರಣಾಗತಿಯಾದ ಮೇಲೆ ಬಲ ಸಿದ್ಧಿಸುತ್ತದೆ. ಇದು ಮಾನವೀಯವಾದುದ್ದಲ್ಲ. ದೈವಿಕವಾದದ್ದಾಗಿದ್ದು, ಶರಣಾಗತಿಯಾದ ಮೇಲೆ ಅಹಂಕಾರ ಸಂಪೂರ್ಣ ನಿರಸಣವಾಗಿ ಅಗ್ನಾತವಾದ ಬಲವೊಂದು ನಮ್ಮನ್ನು ಕೈ ಹಿಡಿದು ನಡೆಸುತ್ತದೆ.

**ಹತ್ತನೆಯದು; ಜ್ಞಾನ** – ಗುರು ಬುದ್ಧರು ವಸ್ತು ಸ್ವಭಾವವನ್ನು ಯತಾರ್ಥವಾಗಿ ನೋಡುವುದನ್ನು ಜ್ಞಾನ ಎನ್ನುತ್ತಾರೆ. ಶರಣಾಗತಿಯಾದ ಮೇಲೆ ದಿವ್ಯ ಚೈತನ್ಯದ ಅನಾವರಣವಾಗಿ ಮೇಲೆ ಈ ಜ್ಞಾನ ದೃಷ್ಟಿ ಸಿದ್ಧಿಸುತ್ತದೆ.

ಹೀಗೆ, ಈ ಬಗೆಯಲ್ಲಿನ ಹತ್ತು ಪಾರಮಿತ (ದಶಪಾರಮ್ಯ)ಗಳು ಬೌದ್ಧಧಮ್ಮದ ದ್ಯೋತಕವಾಗಿವೆ. ಇವನ್ನು ಪ್ರಯೋಗ ಸಾಧನೆಗೈದಾಗ ಮಾತ್ರವಲ್ಲದೇ ಬೌದ್ಧ ಬಿಕ್ಕುವಿನ ಜೀವನ ಸಾರ್ಥಕವೆನಿಸುತ್ತದೆ.

**ಅನಾತ್ಮವಾದ** – ಅನಾತ್ಮವಾದವನ್ನು ಪುದ್ಗಲ – ಪಂಚಶೀಲವಾದವೆಂದೂ ಕರೆಯುತ್ತಾರೆ. ಬೌದ್ಧರು ಪುದ್ಗಲವನ್ನು ವಸ್ತುಸತ್ ಎಂದು ಒಪ್ಪುವುದಿಲ್ಲ. ಆತ್ಮವೆಂಬ ಯಾವ ಪದಾರ್ಥವೂ ಸಹಜವಾಗಿ ಇಲ್ಲ. ಮಿಕ್ಕ ಮತಗಳಿಗೆ ಆತ್ಮ ಇಷ್ಟವಾದರೆ, ಅದು ಸ್ಕಂದ ಸಂತಾನಕ್ಕೆ ಸೂಚನೆ ಮಾತ್ರವಾಗಿರದೇ ವ್ಯಕ್ತಿರಿಕ್ತ ವಸ್ತುವಾಗಿದೆ. ಜ್ಞಾನ ಬಲದಿಂದ ದುಃಖಗಳು ಉಂಟಾಗುತ್ತವೆ. ಮಿತ್ಯ ಆತ್ಮ ದೃಷ್ಟಿಯಲ್ಲಿ ನಿರತವಾಗುವುದರಿಂದ ಮತಾಂತರ ದೂಷಿತವಾದ್ದರಿಂದ ಬೌದ್ಧಧಮ್ಮದಿಂದ ಸ್ವತಂತ್ರವಾದ ಯಾವುದೇ ಬಗೆಯಲ್ಲಿನ ಮೋಕ್ಷವಿಲ್ಲ. ಗುರು ಬುದ್ಧರು ಮಾತ್ರ ಆತ್ಮವಿಲ್ಲದ ಉದಾತ್ತ ಸದ್ಗುಣ ಉಪದೇಶವನ್ನು ಕೊಟ್ಟಿರುತ್ತದೆ. ಆತ್ಮದ ಅಸ್ತಿತ್ವದ ಪರಿಪೂರ್ಣತೆಯು ಪ್ರತ್ಯಕ್ಷ ಪ್ರಮಾಣ ಮತ್ತು ಅನುಮಾನ ಪ್ರಮಾಣಗಳಿಂದಲ್ಲದೆ ಮತ್ತಾವ ಪ್ರಮಾಣಗಳಿಂದ ಸಾಧ್ಯವಾಗುವುದಿಲ್ಲ. ಪಂಚೇಂದ್ರೀಯ ವಿಜ್ಞಾನ ಮತ್ತು ಮನೋವಿಜ್ಞಾನಗಳ ವಿಷಯಗಳ ಫಲ ಅಥವಾ ಅನುಮಾನ ಜ್ಞಾನದಿಂದಾಗಬೇಕು. ಹೇಗೆಂದರೆ, ಅಗೋಚರವಾದ ಅತೀಂದ್ರೀಯ ಉಪಾದಾಯ ರೂಪವಾಗುವಂತೆಯೇ ಅನ್ಯಭಾವಗಳ ಸಮಾನವಾಗಿ ಆತ್ಮದ ಸದ್ಭಾವವಿದ್ದರೆ ಇದರ ಫಲ ಅಥವಾ ಪ್ರತ್ಯಕ್ಷ ಜ್ಞಾನದಿಂದಾಗಬೇಕು. ಒಟ್ಟಾರೆಯಾಗಿ ಗುರು ಬುದ್ಧರು ತಾತ್ವಿಕ ವಿಚಾರದನ್ವಯ ದೇಹ ನಶ್ವರ, ಆತ್ಮ ಅಮರವೆಂಬ ಪರಿಕಲ್ಪನೆ ನಿದಿತವಾಗಿದೆ.

**ನಿರೀಶ್ವರವಾದ** – ನಿರೀಶ್ವರವಾದದ ಸಾಮಾನ್ಯ ಅರ್ಥ ದೇವರನ್ನು ಅಸ್ತಿತ್ವದಲ್ಲಿ ಹಿಡಿದಿರುವುದು. ದೇವರೇ ಇಲ್ಲ ಎಂದು ವಾದಿಸುವುದು. ನಿರೀಶ್ವರವಾದದಲ್ಲಿ ದೇವರಿಲ್ಲ ಎಂದು ಎಲ್ಲಿಯೂ ಕೂಡ ಹೇಳುವುದಿಲ್ಲ, ಆತ್ಮವಿಲ್ಲ, ಈ ಲೋಕವನ್ನು ಬಿಟ್ಟು ಬೇರೆ ಸ್ವರ್ಗ–ನರಕಗಳಿಲ್ಲ, ಪುಣ್ಯ–ಪಾಪಗಳಿಲ್ಲ ಎಂದು ಇದು ವಾದಿಸುತ್ತದೆ. ಆದ್ದರಿಂದ ಈ ವಾದವನ್ನು ನಾಸ್ತಿಕವಾದ ಎಂದು ಕರೆಯಬಹುದು. ಭಾರತದಲ್ಲಿ ಕ್ರಮವಾಗಿ ಚಾರ್ವಾಕರು ಮೂಲ ನಿರೀಶ್ವರವಾದಿಗಳು, ಅನಂತರದಲ್ಲಿ ವೈಶೇಶಿಕರು, ಶಾಕ್ಯರು,

ಮೀಮಾಂಸಕರು, ಬೌದ್ಧರು ಹಾಗೂ ಜೈನರು ಕಂಡುಬಂದಿದ್ದಾರೆ. ದೇವರ ಬಗೆಗಿನ ಕಲ್ಪನೆ ಇಂದು ನಿನ್ನೆಯದಲ್ಲ. ಮನುಷ್ಯರ ಬುದ್ಧಿ ವಿಕಾಸಗೊಳ್ಳಲು ಪ್ರಾರಂಭದಿಂದಲೇ ಆತನನ್ನು ಕಾಡುತ್ತಿರುವ ಪ್ರಶ್ನೆ ಒಂದೇ ದೇವರಿದ್ದಾನೆಯೇ, ಇಲ್ಲವೆಂದು ಜ್ಞಾನಿಗಳು ಇದಕ್ಕೆ ಉತ್ತರವನ್ನು ತಮ್ಮ ತಮ್ಮಲ್ಲೇ ಕಂಡುಕೊಂಡರು. ಆಧ್ಯಾತ್ಮವಾದಿಗಳಿಗೆ ಮಾತ್ರ ಏನೇ ತಿಣುಕಾಡಿದರೂ ಇದಮಿತ್ಥಂ ಎಂದು ಹೇಳಲಾಗದ ಸಂದಿಗ್ಧತೆ ಉಂಟಾದರೆ ನಿರೀಶ್ವರವಾದಿಗಳು ಕಡಾಕಂಡಿತವಾಗಿ ದೇವರ ಇರುವಿಕೆಯನ್ನು ಅಲ್ಲಗಳೆದಿದ್ದಾರೆ. ಈ ವಿಚಾರವು ಬೌದ್ಧಧಮ್ಮದಲ್ಲಿಯೂ ಹಲವು ಹತ್ತು ಚರ್ಚಿತ ರೂಪಗಳನ್ನು ಪಡೆದು ನಿರೀಶ್ವರವಾದದ ರೂಪಕ್ಕೆ ಒತ್ತುಕೊಟ್ಟು ನಿಂತಿದ್ದಾಗಿದೆ. ದೇವರು ಸೃಷ್ಟಿಯಲ್ಲಿ ವಿಲೀನನಾಗಿದ್ದಾನೆ. ಯಾವುದೇ ಭೌತಿಕ ರೂಪದ ವಸ್ತುಗಳಿಲ್ಲ ಎಂಬ ವಾದವನ್ನು ಬೌದ್ಧಧಮ್ಮವು ಕಡಾಕಂಡಿತವಾಗಿ ನಿರೂಪಿತ ರೂಪದಲ್ಲಿ ಹೇಳಿದ್ದಾಗಿದೆ.

ಹೀಗೆ, ಬೌದ್ಧಧಮ್ಮದಲ್ಲಿ ಪ್ರಮುಖ ಆದೇಶಗಳನ್ನು ಮತ್ತು ಪ್ರಧಾನ ಉದಾತ್ತ ಸದ್ಗುಣ ಬೋಧನೆಗಳನ್ನು ಪ್ರಸ್ತುತ ಲೇಖನದಲ್ಲಿ ದಾಖಲೀಕರಿಸಲಾಗಿದೆ.

## ಅಭ್ಯಸಿಸಿರುವ ಪ್ರಧಾನ ಗ್ರಂಥಗಳು


1. ಕೆ.ಎನ್. ಅಶ್ವತ್ತಪ್ಪ, ***ಸಮಗ್ರ ಭಾರತ ಇತಿಹಾಸ.***
2. ಟಿ.ಎನ್. ವಾಸುದೇವ ಮೂರ್ತಿ, *ಬುದ್ಧ ಮತ್ತು ಪರಂಪರೆ.*
3. ಜಯದೇವಿ ಎಂ. ಗಾಯಕವಾಡ, **ಪ್ರಾಚೀನ ಬೌದ್ಧ ವಿದ್ಯಾಕೇಂದ್ರ : ಸನ್ನತಿ.**
4. ವೈ.ಬಿ ನಂದನ, ***ಬುದ್ಧ ಧಮ್ಮ ಸಾಹಿತ್ಯ ಪರಿಚಯ***
5. ಹನುಮಂತ, ಬಿ.ವೈ ಲಲಿತಾಂಬ, **ಬೌದ್ಧ ಧಮ್ಮದರ್ಶನ.**
6. ತಾಳ್ತಜೆ ವಸಂತಕುಮಾರ, **ಬೌದ್ಧಾಯನ.**
7. ಅನುಷಾ ಸಾಹಸ್ರಿಕಾ, ***ಪ್ರಜ್ಞಾ ಪಾರಮಿತಾ.***
8. ಎಲ್. ಬಸವರಾಜ, ***ಬುದ್ಧ ಚರಿತೆ.***